# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2017-18/ ey8.178          ದಿನಾಂಕ: 6/12 .11.2017

## -: ಜನ ಸಂಪರ್ಕ ಸಭೆಯ ನಡಾವಳಿ :-

ದಿನಾಂಕ 18/11/2017 ರ ಬೆಳಿಗ್ಗೆ 11:00 ಘಂಟೆಗೆ ಹನೂರು ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಹನೂರು ಉಪವಿಭಾಗಕ್ಕೆ ಸಂಬಂಧಿಸಿದಂತೆ ಬಂದ ದೂರುಗಳು ಹಾಗೂ ಕೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

ಚಾವಿಸನಿನಿ. ನಿಗಮ ಕಾರ್ಯಾಲಯ ಸಂ 2818 ತಾ 08/12/17 ಮೈಸೂರು

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು**

1. ಶ್ರೀ.ಕೆ.ರಾಮಚಂದ್ರ : ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮೈಸೂರು.
2. ಶ್ರೀಮತಿ ತಾರಾ ಎನ್. : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮೈಸೂರು.
3. ಶ್ರೀ ವಿಜಯಕುಮಾರ್ : ಲೆಕ್ಕಾಧಿಕಾರಿ, ಚಾವಿಸನಿನಿ, ವಿಭಾಗ ಕಛೇರಿ, ಕೊಳ್ಳೇಗಾಲ
4. ಶ್ರೀಮತಿ ಜೆ.ದೀಪಾ ಗಾಂಧಿ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹನೂರು ಉಪವಿಭಾಗ.
5. ಶ್ರೀ.ಎನ್.ಮಹೇಶ್ : ಪ್ರಭಾರ ಸಹಾಯಕ ಇಂಜಿನಿಯರ್(ವಿ), ಹನೂರು ಶಾಖೆ, ಹನೂರು ಉಪವಿಭಾಗ.
6. ಶ್ರೀ.ಟಿ.ಸಂತೋಷ್ : ಕಿರಿಯ ಇಂಜಿನಿಯರ್(ವಿ), ರಾಮಾಪುರ ಶಾಖೆ, ಹನೂರು ಉಪವಿಭಾಗ.
7. ಶ್ರೀ.ಆರ್.ಭಾಸ್ಕರ್ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಲೊಕ್ಕನಹಳ್ಳಿ ಶಾಖೆ, ಹನೂರು ಉಪವಿಭಾಗ.
8. ಶ್ರೀ.ಎಸ್.ವೆಂಕಟೇಶಮೂರ್ತಿ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಕೌದಳ್ಳಿ ಶಾಖೆ, ಹನೂರು ಉಪವಿಭಾಗ.
9. ಶ್ರೀ.ಕೆ.ಎಸ್.ನಾಗಭೂಷಣ : ಪ್ರಭಾರ ಹಿರಿಯ ಸಹಾಯಕ, ಕಂದಾಯ ಶಾಖೆ. ಹನೂರು ಉಪವಿಭಾಗ.

**ದಿನಾಂಕ 24.05.2017 ರಂದು ಹನೂರು ಉಪವಿಭಾಗದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಬಾಕಿ ಉಳಿದಿರುವ ದೂರುಗಳ ವಿವರ**

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಸಲಹೆ |
|---|---|---|---|
| 1 | ಕರಿಯಪ್ಪ, ಅಧ್ಯಕ್ಷರು, ರೈತ ಸಂಘ, ಚಂಗಡಿ | *ಕೆಲವು ಕಡೆಗಳಲ್ಲಿ ಕಬ್ಬಿಣದ ಕಂಬಗಳಿದ್ದು ಅವುಗಳನ್ನು ಬದಲಾಯಿಸಲು ಕ್ರಮ ಕೈಗೊಂಡಿರುವುದಿಲ್ಲ. | *ಕಬ್ಬಿಣದ ಕಂಬಗಳನ್ನು ಬದಲಾಯಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ದಿ:07.08.17 ರಂದು ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. |
| 2 | ಮಹೇಂದ್ರಗುರು, ಕಣ್ಣೂರು | *ಕಣ್ಣೂರು ಗ್ರಾಮದಲ್ಲಿ ಕೆಲವು ಕಡೆಗಳಲ್ಲಿ ವಾಹಕವು ಜೋತು ಬಿದ್ದಿದ್ದು ಸರಿಪಡಿಸಲು ಕೋರಿರುತ್ತಾರೆ. | * SDP ಯೋಜನೆಯಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಅನುಮೋದನೆಗಾಗಿ ವಿಭಾಗೀಯ ಕಛೇರಿಗೆ ಕಳುಹಿಸಲಾಗಿದೆ. |
| 3 | ವೆಂಕಟೇಶ್, ಹನೂರು | *ಹನೂರು ಪಟ್ಟಣದ ಜಿ.ವಿ.ಗೌಡ ಕಾಲೇಜಿನ ಹತ್ತಿರ ವೋಲ್ಟೇಜ್ ತುಂಬಾ ಕಡಿಮೆ ಇದ್ದು ಸರಿಪಡಿಸಲು ಕೋರಿರುತ್ತಾರೆ. | *ಉಗ್ರಾಣದಲ್ಲಿ ಸಾಮಾಗ್ರಿಗಳ ಕೊರತೆಯಿಂದ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ, ಸಾಮಾಗ್ರಿಗಳು ಲಭ್ಯತೆ ನಂತರ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. |

DGM-RA-1 08/12          AGM-RAG 11/12

ದಿನಾಂಕ 29.08.2017 ರಂದು ಪಡೆದ ದೂರುಗಳ ವಿವರ:-

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ವಿನೋದ್ ಕುಮಾರ್, ಕರವೇ ಅಧ್ಯಕ್ಷರು, ಹನೂರು, | *H1L-4589 ಸ್ಥಾವರವು ಸುಮಾರು 5 ವರ್ಷಗಳಿಂದ ಉಪಯೋಗಿಸುತ್ತಿರುವುದಿಲ್ಲ Idle ಆಗಿದ್ದು ನಿಗಮದ ನೌಕರರು ವಿದ್ಯುತ್ ಸಂಪರ್ಕವನ್ನು ತೆಗೆಯಲು ಮುಂದಾಗಿರುತ್ತಾರೆಂದು ತಿಳಿಸಿರುತ್ತಾರೆ. | *ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| 2 | ಗಿರೀಶ್, ಕರವೇ ಕಾರ್ಯದರ್ಶಿ, ಹನೂರು. | *ಹನೂರು ಪಟ್ಟಣ ಕೆ.ಇ.ಬಿ. ಕಛೇರಿಯ ಮುಂಭಾಗ ಇರುವ 11 ಕೆವಿ ವಿದ್ಯುತ್ ಮಾರ್ಗವು ಲೊಕ್ಕನಹಳ್ಳಿಗೆ ಹಾದು ಹೋಗಿದ್ದು ಸದರಿ ವಿದ್ಯುತ್ ಮಾರ್ಗದಿಂದ ಸುಮಾರು 15 ರಿಂದ 20 ಮನೆಗಳಿಗೆ ತೊಂದರೆಯಾಗಿದ್ದು ಸರಿಪಡಿಸಿಕೊಡಲು ಕೋರಿರುತ್ತಾರೆ. | *ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ಮಾಡಿ ವಿದ್ಯುತ್ ಮಾರ್ಗವನ್ನು ಸೂಕ್ತ ಸ್ಥಳಕ್ಕೆ ಬದಲಾಯಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚನೆ ನೀಡಲಾಯಿತು. |
| 3 | ವಿನೋದ್ ಕುಮಾರ್, ಕರವೇ ಅಧ್ಯಕ್ಷರು, ಹನೂರು, | *ನಿರಂಜನಮೂರ್ತಿ, ಶಾಗ್ಯ, ಮಹದೇವಸ್ವಾಮಿ, ಶಾಗ್ಯ, ಮಲ್ಲೇಶ ಬಿನ್ ಸಿದ್ದಪ್ಪ, ಶಾಗ್ಯ, ಶ್ರೀಮತಿ.ಸುಮಾ ಕೋಂ ಬಸವಣ್ಣ, ಶಾಗ್ಯ, ರವರಿಗೆ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿ 1 ವರ್ಷವಾಗಿದ್ದು ಇದುವರೆವಿಗೂ ಅಗತ್ಯ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. | *ಈಗಾಗಲೇ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿರುವ ಗ್ರಾಹಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲು ಟೆಂಡರ್ ನೀಡಲಾಗಿದ್ದು ಜ್ಯೇಷ್ಠತೆ ಆಧಾರದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. |
| 4 | ಎಸ್,ಅಭಿಷೇಕ್, ಉದ್ದನೂರು, | *ಉದ್ದನೂರು ಗ್ರಾಮದ ಪರಿವರ್ತಕವು ಅಧಿಕ ಭಾರದಿಂದ ಕೂಡಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಕೋರಿರುತ್ತಾರೆ. | *ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಯಿತು. |
| 5 | ವೆಂಕಟಾಚಲ, ರಾಮಾಪುರ | *ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಇದುವರೆವಿಗೂ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. | *ಈಗಾಗಲೇ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿರುವ ಗ್ರಾಹಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲು ಟೆಂಡರ್ ನೀಡಲಾಗಿದ್ದು ಜ್ಯೇಷ್ಠತೆ ಆಧಾರದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. |
| 6 | ಆರಿಕ್‌ರಾಜ್, ಎಂ.ಜಿ.ದೊಡ್ಡಿ, | *ಎಂ.ಜಿ.ದೊಡ್ಡಿ ಗ್ರಾಮದ 250 ಕೆವಿಎ ಪರಿವರ್ತಕವು ಅಧಿಕ ಭಾರದಿಂದ ಕೂಡಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡಲು ಕೋರಿರುತ್ತಾರೆ. | *ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಯಿತು. |

ದಿನಾಂಕ 18.11.2017 ರಂದು ಪಡೆದ ದೂರುಗಳ ವಿವರ:-

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ಶ್ರೀ.ರಾಜಶೇಖರಮೂರ್ತಿ, ಹನೂರು. | *ಹನೂರಿನ ಮಹದೇಶ್ವರ ಬೆಟ್ಟ ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್ ಪಕ್ಕದಲ್ಲಿ ವಿದ್ಯುತ್ ಮಾರ್ಗಗಳು ಜೋತು ಬಿದ್ದಿದ್ದು ಹಾಗೂ ಕಟೌಟ್‌ಗಳು ತುಂಬಾ ಹಳೆಯದಾಗಿದ್ದು ಬದಲಾವಣೆ ಮಾಡಲು ಕೋರಿರುತ್ತಾರೆ. | *ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಯಿತು. |

| | | | |
|---|---|---|---|
| 2 | ಶ್ರೀ.ನಾಗೇಶ, ಬೈರನಾಥ | *3 ತಿಂಗಳಿಂದ ನಮ್ಮ ನೀರಾವರಿ ಪುಂಪುಸೆಟ್ಟಿಗೆ ವಿದ್ಯುತ್ ಸಂಪರ್ಕ ನೀಡಿದ್ದು, ಪ್ರಸ್ತುತ ಇರುವ ಶಾಖಾಧಿಕಾರಿಗಳು ಸಂಪರ್ಕವನ್ನು ತೆಗೆಸಿರುತ್ತಾರೆಂದು ದೂರಿರುತ್ತಾರೆ. | *ಅಕ್ರಮ-ಸಕ್ರಮ ಯೋಜನೆಯಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಮುಂದಿನ ದಿನಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸ ಲಾಗುವುದೆಂದು ಅಧೀಕ್ಷಕ ಇಂಜಿನಿಯರ್(ವಿ) ರವರು ತಿಳಿಸಿದರು. |
| 3 | ಶ್ರೀ.ಚಿಕ್ಕರಾಜು, ಉದ್ದನೂರು | *ಸ್ಥಾವರ ಸಂಖ್ಯೆ: ಗಆಐಃಎ-272 ಸ್ಥಾವರದ ಗ್ರಾಹಕರು ತಮ್ಮ ಮನೆಯ ಮೇಲೆ ವಿದ್ಯುತ್ ಮಾರ್ಗವು ಹಾದು ಹೋಗಿದ್ದು ಸರಿಪಡಿಸಲು ಕೋರಿರುತ್ತಾರೆ. | *ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಶಾಖಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ವಿದ್ಯುತ್ ಮಾರ್ಗವನ್ನು ಬದಲಾವಣೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| 4 | ವಿನೋದ್ ಕುಮಾರ್, ಕರವೇ ಅಧ್ಯಕ್ಷರು, ಹನೂರು, ಮೊ.ಸಂ.9008588143 | *ವೀರಪ್ಪ ಬಿನ್ ಮಾದಪ್ಪ, ಶಂಭುಲಿಂಗಪ್ಪ ಬಿನ್ ಮಾದಪ್ಪ, ಸುಮ ಕೋಂ ಬಸಪ್ಪ, ಶಾಗ್ಯ, ರವರಿಗೆ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಇದುವರೆವಿಗೂ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿರುತ್ತಾರೆ. | *ಈಗಾಗಲೇ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿರುವ ಗ್ರಾಹಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲು ಟೆಂಡರ್ ನೀಡಲಾಗಿದ್ದು ಜ್ಯೇಷ್ಠತೆ ಆಧಾರದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. |
| 5 | ಕರಿಯಪ್ಪ, ಅಧ್ಯಕ್ಷರು, ರೈತ ಸಂಘ, ಚಂಗಡಿ | *ಮಲ್ಲಯ್ಯನಪುರ, ಪುದುನಗರ, ಜ್ಯೋತಿಪುರ ಗ್ರಾಮಗಳಿಗೆ ನಿರಂತರ ಜ್ಯೋತಿ ಯೋಜನೆಯ ಸೌಲಭ್ಯವನ್ನು ವಿಸ್ತರಿಸಲು ಕೋರಿರುತ್ತಾರೆ. | *ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ಮಾಡಿ ನಿರಂತರ ಜ್ಯೋತಿ ಯೋಜನೆಯ ಸೌಲಭ್ಯವನ್ನು ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚನೆ ನೀಡಲಾಯಿತು. |
| 6 | ಕರಿಯಪ್ಪ, ಅಧ್ಯಕ್ಷರು, ರೈತ ಸಂಘ, ಚಂಗಡಿ | *ಮಹದೇಶ್ವರ ಬೆಟ್ಟ ಶಾಖೆಯ ಮಹದೇಶ್ವರ ಬೆಟ್ಟ ಗ್ರಾಮದಲ್ಲಿ ಕೊಬಡಿಕ್ಕಿ ಗ್ರಾಮದಲ್ಲಿ 25 ಕೆವಿಎ ಪರಿವರ್ತಕ ಇದ್ದು ಸದರಿ ಪರಿವರ್ತಕಕ್ಕೆ 9 ನೀರಾವರಿ ಸ್ಥಾವರಗಳು ಹಾಗೂ ಕುಡಿಯುವ ನೀರಿನ ಸೌಲಭ್ಯದ ಸ್ಥಾವರದ ಸಂಪರ್ಕವಿದ್ದು ಸರಬರಾಜಿನಲ್ಲಿ ವ್ಯತ್ಯಯವಾಗುತ್ತಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡಲು ಕೋರಿ ರುತ್ತಾರೆ. | *ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ಮಾಡಿ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚನೆ ನೀಡಲಾಯಿತು. |
| 7 | ಪಳನಿಸ್ವಾಮಿ, ನಾಗನತ್ತ ಗ್ರಾಮ | *ನಾಗನತ್ತ ಗ್ರಾಮದ 250 ಕೆವಿಎ ಪರಿವರ್ತಕವು ಪದೇ ಪದೇ ವಿಫಲಗೊಳ್ಳುತ್ತಿದ್ದು ಪ್ರಸ್ತುತ 68 ನೀರಾವರಿ ಸ್ಥಾವರಗಳಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡಲು ಕೋರಿರುತ್ತಾರೆ. | *ವಿಷಯಕ್ಕೆ ಸಂಬಂಧಿಸಿದಂತೆ ಅಕ್ರಮ-ಸಕ್ರಮ ಯೋಜನೆಯಲ್ಲಿ ಪರಿವರ್ತಕವನ್ನು ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತ ಉಪವಿಭಾಗಾಧಿಕಾರಿಗಳಿಗೆ ಸೂಚನೆ ನೀಡಲಾಯಿತು. |
| 8 | ಶ್ರೀ.ಹುಚ್ಚಯ್ಯ, ಉದ್ದನೂರು | *ಉದ್ದನೂರು ಗ್ರಾಮದಲ್ಲಿ ಕೆಲವು ಕಡೆಗಳಲ್ಲಿ ವಿದ್ಯುತ್ ಮಾರ್ಗಗಳು ತುಂಬ ಜೋತು ಬಿದ್ದಿದ್ದು ಸರಿಪಡಿಸಲು ಕೋರಿರುತ್ತಾರೆ. | *ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸೂಚನೆ ನೀಡಲು ತಿಳಿಸಲಾಯಿತು. |
| 9 | ನಿರಂಜನ ಮೂರ್ತಿ, ಶಾಗ್ಯ | *ಶಾಗ್ಯ ಗ್ರಾಮದಲ್ಲಿರುವ ವೀರಭದ್ರಪ್ಪ ಪರಿವರ್ತಕದ ವಾಹಕಗಳು ತುಂಬಾ ಜೋತು ಬಿದ್ದಿದ್ದು ಸರಿಪಡಿಸಲು ಕೋರಿರುತ್ತಾರೆ. | *ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಶಾಖಾಧಿಕಾರಿಗೆ ಸೂಚನೆ ನೀಡಲು ಉಪವಿಭಾಗಾಧಿಕಾರಿಗೆ ಸೂಚನೆ ನೀಡಲಾಯಿತು. |
| 10 | ಡಾ॥ಅಶ್ವಕ್, ಕೌದಳ್ಳಿ | *ಕೌದಳ್ಳಿ ನೋಬಲ್ ವಿದ್ಯಾ ಸಂಸ್ಥೆಗೆ ನಿರಂತರ ಜ್ಯೋತಿ ಯೋಜನೆಯ ವಿದ್ಯುತ್ ಸಂಪರ್ಕ ಕಲ್ಪಿಸಲು ಹಲವು ಬಾರಿ ಕೋರಿದ್ದರೂ ಕಾಮಗಾರಿ ಕೈಗೊಂಡಿರುವುದಿಲ್ಲ. | *ಸದರಿ ವಿದ್ಯಾ ಸಂಸ್ಥೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅಂದಾಜು ಪಟ್ಟಿಗೆ ಕಾರ್ಯಾದೇಶ ಗೊಂಡಿದ್ದು ಅನುಮೋದನೆಯನ್ನು ನೀಡ ಲಾಗಿರುತ್ತದೆ, ಸದರಿ ಕಾಮಗಾರಿಗೆ ಅಗತ್ಯವಾಗಿರುವ ಸಾಮಾಗ್ರಿಗಳನ್ನು ಸಾಗಿಸಲು ಲಾರಿ ಅಲಭ್ಯತೆಯಿಂದ ಕಾಮಗಾರಿಯನ್ನು ಕೈಗೊಳ್ಳಲು ಓನ್ನಡೆಯಾಗಿದ್ದು ಮುಂದಿನ ದಿನಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. |

| | | | |
|---|---|---|---|
| 11 | ಪಳನಿಸ್ವಾಮಿ ದೊಡ್ಡಿ ಗ್ರಾಮಸ್ಥರು | *ಪಳನಿಸ್ವಾಮಿ ದೊಡ್ಡಿಗೆ ನಿರಂತರ ಜ್ಯೋತಿ ಯೋಜನೆಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ. | *ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಯಿತು. |
| 12 | ಒಡೆಯರ ಪಾಳ್ಯ ಗ್ರಾಮಸ್ಥರು, | *ಹುತ್ತೂರು, ಪಿ.ಜಿ.ಪಾಳ್ಯ, ಹಾಗೂ ಒಡೆಯರಪಾಳ್ಯ ಗ್ರಾಮಗಳಿಗೆ ನಿರಂತರ ಜ್ಯೋತಿ ಯೋಜನೆ ಸಂಪೂರ್ಣಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. | *ಈಗಾಗಲೇ ನಿರಂತರ ಜ್ಯೋತಿ ಕಾಮಗಾರಿಯನ್ನು ಕೈಗೊಂಡಿದ್ದು ಎಲ್.ಟಿ. ಮಾರ್ಗವನ್ನು ವಿಭಾಗಿಸುವ ಕಾಮಗಾರಿ ಬಾಕಿ ಇದ್ದು ಮುಂದಿನ ದಿನಗಳಲ್ಲಿ ಅಗತ್ಯ ಕ್ರಮ ಕೈಗೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದೆಂದು ತಿಳಿಸಲಾಯಿತು. |
| 13 | ಶ್ರೀ.ರಾಜಶೇಖರಮೂರ್ತಿ. ಹನೂರು. | *ನಿರಂತರ ಜ್ಯೋತಿ ವಿದ್ಯುತ್ ಮಾರ್ಗದಲ್ಲಿ ಹೆಚ್ಚುವರಿಯಾಗಿರುವ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲು ಕೋರಿರುತ್ತಾರೆ. | *ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. |

ಅಧೀಕ್ಷಕ ಇಂಜನಿಯರ್ (ವಿ)
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

<u>ಪ್ರತಿಯನ್ನು:</u>

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಕೊಳ್ಳೇಗಾಲ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಹನೂರು ಉಪವಿಭಾಗ ರವರ ಮಾಹಿತಿಗಾಗಿ.
7. ಓಆಸ/ಪ್ರಕ/ಕಡತ.